**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಎಂ.ಪಿ.ಸುಜಾ ಕುಶಾಲಪ್ಪ ಇವರು ನಿಯಮ-72ರ ಮೇರೆಗೆ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ:** ಮಡಿಕೇರಿ ಜಿಲ್ಲೆ, ಜಿಲ್ಲಾಧಿಕಾರಿಗಳ ಕಛೇರಿಯ ನಿರ್ಮಾಣ ಹಂತದ ಸುಮಾರು ರೂ. 7 ಕೋಟಿ ವೆಚ್ಚದ ತಡೆಗೋಡೆಯು ಕುಸಿದಿದ್ದು, ಸಂಪೂರ್ಣವಾಗಿ ಕುಸಿಯುವ ಹಂತಕ್ಕೆ ತಲುಪಿದೆ. ಕಾಮಗಾರಿಯನ್ನು ಪ್ರಾರಂಭಿಸಿ ಎರಡು ವರ್ಷವು ಸಹ ಪೂರ್ಣಗೊಂಡಿಲ್ಲ. ಈಗಾಗಲೇ ಸದರಿ ಕಾಮಗಾರಿಗೆ ರೂ. 6 ಕೋಟಿಗಳ ಅನುದಾನವು ಸಹ ಬಿಡುಗಡೆಯಾಗಿದೆ. ಈ ಸಂದರ್ಭದಲ್ಲಿ ತಡೆಗೋಡೆಯು ಕುಸಿಯುತ್ತಿರುವುದನ್ನು ಕಂಡರೆ ಇದು ಕಳಪೆ ಕಾಮಗಾರಿಯಿಂದ ಕೂಡಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಕಾಮಗಾರಿಯಲ್ಲಿನ ಲೋಪದೋಷಗಳು, ಹಣಕಾಸು ನಿರ್ವಹಣೆ ಇವೆಲ್ಲವುಗಳ ಮಾಹಿತಿಯನ್ನು ತಿಳಿದು ಸದರಿ ಕಾಮಗಾರಿಯನ್ನು ಮಾಡುತ್ತಿರುವ ಏಜೆನ್ಸಿ, ಗುತ್ತಿಗೆದಾರರು ಹಾಗೂ ಇದಕ್ಕೆ ಕಾರಣವಾದ ಅಧಿಕಾರಿಗಳ ವಿರುದ್ಧ ತನಿಖೆಯನ್ನು ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಲೋಕೋಪಯೋಗಿ ಸಚಿವರ ಗಮನ ಸೆಳೆಯಬಯಸುತ್ತೇನೆ.

*****

**ಉತ್ತರ:** ಕೊಡಗು ಜಿಲ್ಲೆ ಮಡಿಕೇರಿ ಪಟ್ಟಣದಲ್ಲಿ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡದ ಪಕ್ಕದಲ್ಲಿನ ಮಂಗಳೂರು ರಸ್ತೆಗೆ ತಡೆಗೋಡೆ ನಿರ್ಮಾಣ ಹಾಗೂ ಜಿಲ್ಲಾ ಕಛೇರಿಗೆ ಸಂಪರ್ಕ ರಸ್ತೆ ನಿರ್ಮಿಸುವ ಕಾಮಗಾರಿಯ ರೂ.700.00 ಲಕ್ಷಗಳ ಅಂದಾಜು ಪಟ್ಟಿಗೆ ಕಂದಾಯ ಇಲಾಖೆಯು ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ದಿನಾಂಕ:18/03/2021 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ಇಲ್ಲಿಯವರೆಗೆ ರೂ.625.00 ಲಕ್ಷ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿರುತ್ತದೆ.

ಪ್ರಸಕ್ತ ಸಾಲಿನ ಭಾರಿ ಮಳೆಯಿಂದಾಗಿ ತಡೆಗೋಡೆಯ ಹಲವು ಕಾಂಕ್ರೀಟ್ ಪ್ಯಾನಲ್‌ಗಳು ಉಬ್ಬಿ ಹೊರಚಾಚಿಕೊಂಡಿದ್ದು, ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದ) ಬೆಂಗಳೂರು ರವರು ಕಾಮಗಾರಿಯ ಸ್ಥಳ ಪರಿವೀಕ್ಷಣೆ ಮಾಡಿದಾಗ ಈಗಾಗಲೇ ಮಾಡಿರುವ ಎಂಬ್ಯಾಕ್‌ಮೆಂಟ್ ಮೂಲಕ ಆರ್.ಇ. ವಾಲ್ ಹಿಂಭಾಗ ಮಳೆಯ ನೀರು ಮಣ್ಣಿನ ಮೂಲಕ ಹಿಂಗುತ್ತಿರುವುದನ್ನು ಗಮನಿಸಿರುತ್ತಾರೆ. ಆದ್ದರಿಂದ ತಕ್ಷಣ ಎಂಬ್ಯಾಕ್‌ಮೆಂಟ್ ಪಕ್ಕದಲ್ಲಿ ಚರಂಡಿ ನಿರ್ಮಾಣ ಮಾಡಿ ಅದರ ಮೇಲ್ಮೈ ಮೇಲೆ ಸಂಪೂರ್ಣವಾಗಿ ಪ್ಲಾಸ್ಟಿಕ್ ಶೀಟ್‌ನ ಹೊದಿಕೆಯನ್ನು ಅಳವಡಿಸಿ ನೀರು ಸರಾಗವಾಗಿ ಕೆಳಮುಖವಾಗಿ ಹರಿದು ಹೋಗುವಂತೆ ಹಾಗೂ ಮಳೆಯ ನೀರು ಆರ್.ಇ ಪ್ಯಾನಲ್ ಒಳಭಾಗಕ್ಕೆ ಹೋಗದಂತೆ/ಇಂಗದಂತೆ ಎಚ್ಚರವಹಿಸಿ ಕಾಮಗಾರಿಯನ್ನು ನಿರ್ವಹಿಸಲು ಸೂಚಿಸಿರುತ್ತಾರೆ. ಅದರಂತೆ, ಗುತ್ತಿಗೆದಾರರಿಂದ ಕಾಮಗಾರಿ ನಿರ್ವಹಿಸಲಾಗಿರುತ್ತದೆ.

ತದನಂತರದಲ್ಲಿ ದಿನಾಂಕ:21/07/2022ರಂದು ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರಾದ ಶ್ರೀ.ಜಯಪ್ರಸಾದ್ ಹಾಗೂ ಸದಸ್ಯರಾದ ಶ್ರೀ.ಬುರ್ಜಿ ರವರು ಸ್ಥಳ ಪರಿಶೀಲನೆ ಮಾಡಿ, ಕಾಂಕ್ರೀಟ್ ಪ್ಯಾನಲ್‌ಗಳು ಉಬ್ಬಿ ಹೊರಚಾಚಿಕೊಂಡಿರುವ ಭಾಗದಲ್ಲಿ ಮರಳು ಚೀಲಗಳನ್ನು ಅಳವಡಿಸಿ ತಾತ್ಕಲಿಕ ರಕ್ಷಣಾ ಕಾಮಗಾರಿಯನ್ನು ನಿರ್ವಹಿಸುವಂತೆ ಹಾಗೂ Reinforcement Earth india, New Delhi ರವರು ಹಾಗೂ ಭಾರತೀಯ ವಿಜ್ಞಾನ ಸಂಸ್ಥೆ ನಿವೃತ್ತ ಪ್ರಾಧ್ಯಾಪಕರಾದ ಶ್ರೀ. ಬಿ.ಆರ್. ಶ್ರೀನಿವಾಸ್‌ಮೂರ್ತಿ ರವರೊಂದಿಗೆ ಚರ್ಚಿಸಿ ತಾಂತ್ರಿಕ ಪರಿಣಿತರನ್ನು ಒಳಗೊಂಡಂತೆ ವರದಿಯನ್ನು ಪಡೆದುಕೊಂಡು ಶಾಶ್ವತ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. ಅದರಂತೆ ತಾತ್ಕಲಿಕ ದುರಸ್ಥಿ ಕಾಮಗಾರಿಯನ್ನು ಕೈಗೊಂಡು ರಾಷ್ಟ್ರೀಯ ಹೆದ್ದಾರಿ-275ರಲ್ಲಿ ವಾಹನಗಳು ಸಂಚಾರ ಮಾಡಲು ಅನುವು ಮಾಡಿಕೊಡಲಾಗಿರುತ್ತದೆ.

ಸದರಿ ಕಾಮಗಾರಿಯಲ್ಲಿ ಉಂಟಾಗಿರುವ ಹಾನಿಯನ್ನು ಶಾಶ್ವತವಾಗಿ ಸರಿಪಡಿಸಲು ಕಾಮಗಾರಿಯ ಗುತ್ತಿಗೆದಾರರಿಂದ ಕ್ರಿಯಾ ಯೋಜನೆ/ನಿರ್ವಹಿಸುವ ಕಾರ್ಯವಿಧಾನವನ್ನು ಪಡೆದು ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯಲ್ಲಿ ಮಂಡಿಸಿ ಸಮಿತಿಯ ಸೂಚನೆ ಮತ್ತು ಸಲಹೆಗಳನ್ನು ಪಡೆದು ಶಾಶ್ವತ ಪರಿಹಾರ ಕಾಮಗಾರಿಯನ್ನು ಮಳೆ ನಿಂತ ನಂತರ ಸದರಿ ಗುತ್ತಿಗೆದಾರರಿಂದ ನಿರ್ವಹಿಸಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.

ಸದರಿ ಕಾಮಗಾರಿಯು ಪ್ರಸ್ತುತ ಪ್ರಗತಿಯಲ್ಲಿದ್ದು, ಇಲ್ಲಿಯವರೆಗೆ ನಿರ್ಮಿಸಿರುವ ತಡೆಗೋಡೆಯು ಕುಸಿದಿರುವುದಿಲ್ಲ. ತಡೆಗೋಡೆಯ ಹಲವು ಕಾಂಕ್ರೀಟ್ ಪ್ಯಾನಲ್‌ಗಳು ಉಬ್ಬಿ ಹೊರಚಾಚಿಕೊಂಡಿದ್ದು, ಕಾಮಗಾರಿಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರ ವತಿಯಿಂದಲೇ ಪ್ರಸ್ತುತ ತಾತ್ಕಲಿಕ ರಕ್ಷಣಾ ಕಾಮಗಾರಿಯನ್ನು ನಿರ್ವಹಿಸಲಾಗಿದ್ದು, ತಜ್ಞರು ಸೂಚಿಸಲಿರುವ ಶಾಶ್ವತ ಪರಿಹಾರ ಕಾಮಗಾರಿಯನ್ನು ಸಹ ಸದರಿ ಗುತ್ತಿಗೆದಾರರ ವತಿಯಿಂದಲೇ ಗುತ್ತಿಗೆದಾರರ ಹೊಣೆ ಮತ್ತು ಜವಾಬ್ದಾರಿಯೊಂದಿಗೆ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.

**(ಸಂಖ್ಯೆ: ಲೋಇ/40/ಬಿಎಲ್‌ಕ್ಯೂ/2022)**

**(ಸಿ.ಸಿ ಪಾಟೀಲ್)**
ಮಾನ್ಯ ಸಚಿವರು,
ಲೋಕೋಪಯೋಗಿ ಇಲಾಖೆ